ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 52-56
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಮಾನತೆಯ ಸಮಾಜ ನಿರ್ಮಾಣದಲ್ಲಿ ಬಸವ ಚಿಂತನೆ : ಒಂದು ಸಮಾಜಶಾಸ್ತ್ರೀಯ ವಿಶ್ಲೇಷಣೆ

**ಡಾ. ಮಂಜುನಾಥ ಆಚಾರಿ**
ಸಮಾಜಶಾಸ್ತ್ರ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು, ಉಡುಪಿ ಜಿಲ್ಲೆ

**Abstract:**
*ಸಾಮಾಜಿಕ ಸಮಸ್ಯೆ ಎನ್ನುವುದು ಒಂದು ಸಾರ್ವತ್ರಿಕ ವಿದ್ಯಮಾನವಾಗಿದ್ದು ಜಗತ್ತಿನ ಪ್ರತಿಯೊಂದು ಸಮಾಜವೂ ಕೂಡ ಒಂದಲ್ಲ ಒಂದು ಬಗೆಯ ಸಮಸ್ಯೆಯ ಸುಳಿಗೆ ಸಿಲುಕಿದೆ. ಸಮಸ್ಯೆಗಳಿಂದ ಮುಕ್ತವಾದ ಸಮಾಜವೇ ಪ್ರಪಂಚದಲ್ಲಿ ಇಲ್ಲ ಎನ್ನಬಹುದು. ಸಾಮಾಜಿಕ ಸಮಸ್ಯೆಗಳು ಶೂನ್ಯದಿಂದ ಉತ್ಪನ್ನಗೊಳ್ಳುವುದಿಲ್ಲ. ಅವುಗಳಿಗೆ ಪೂರಕವಾದ ಮತ್ತು ಪ್ರಚೋದಕವಾದ ಸಾಮಾಜಿಕ ಪರಿಸ್ಥಿತಿಗಳಿವೆ ಎಂಬ ಕಾರಣದಿಂದ ಅವು ಹುಟ್ಟಿಕೊಳ್ಳುತ್ತವೆ. ರಾಬರ್ಟ್ ನಿಸ್ಬೆಟ್ ಅವರ ವಿಶ್ಲೇಷಣೆಯಂತೆ ಭಾರತದ ಸಾಮಾಜಿಕ ಪರಿಸ್ಥಿತಿಗಳನ್ನು ಅವಲೋಕಿಸುವುದಾದರೆ ಶತಮಾನಗಳ ಪರ್ಯಂತ ಇಲ್ಲಿನ ಜನರಿಗೆ ಅಸ್ಪೃಶ್ಯತೆ, ಜಾತೀಯತೆ, ಸತಿಪದ್ಧತಿ, ಬಾಲ್ಯವಿವಾಹ, ವಿಧವಾ ವಿವಾಹ ಅವಕಾಶ ನಿರಾಕರಣೆ, ದೇವದಾಸಿ ಪದ್ಧತಿ, ಜೀತ ಪದ್ಧತಿ, ಪರದಾ ಪದ್ಧತಿ, ಅನಕ್ಷರತೆ, ಸ್ತ್ರೀ ಸ್ವಾತಂತ್ರ್ಯ ನಿರಾಕರಣೆ ಮುಂತಾದ ಅದೆಷ್ಟೋ ಸಮಸ್ಯೆಗಳು ಜನಜೀವನದ ಭಾಗವಾಗಿದ್ದವು. ಭಾರತೀಯ ಸಮಾಜವನ್ನು ನಿರಂತರವಾಗಿ ಕಾಡುತ್ತಾ ಬಂದಿದ್ದ ಸಾಮಾಜಿಕ ಧಾರ್ಮಿಕ ಅನಿಷ್ಟಪದ್ಧತಿಗಳು ಮತ್ತು ಪಿಡುಗಳ ವಿರುದ್ಧ ಸಂಪೂರ್ಣವಾಗಿ ಅಹಿಂಸಾತ್ಮಕ ಸ್ವರೂಪದಲ್ಲಿ ಮೌನಕ್ರಾಂತಿಯನ್ನು ಹುಟ್ಟುಹಾಕಿದ ಮಹಾಪುರುಷರ ಸಾಲಿನಲ್ಲಿ ವಿಶಿಷ್ಟ ಸ್ಥಾನ ಪಡೆದವರು ಬಸವಣ್ಣನವರು. ಸಮಾಜದಲ್ಲಿದ್ದ ವಿಷಮ ಪರಿಸ್ಥಿತಿಗಳನ್ನು ಸಮಸ್ಥಿತಿಗೆ ತರಲು ಬಸವೇಶ್ವರರು ನಡೆಸಿದ ಜನಪರ ಆಂದೋಲನಗಳು ನಮ್ಮ ನಾಡಿನ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಕಾಯಕ ತತ್ವ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ, ಶ್ರಮ ಗೌರವದಂತಹ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಬಸವಣ್ಣನವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನಿಸಿದರೆ ಅವುಗಳಲ್ಲಿ ಸಮಾಜಶಾಸ್ತ್ರಜ್ಞರು ಗಮನಿಸಬಹುದಾದ ಗಂಭೀರ ಸ್ವರೂಪದ ಸಾಮಾಜಿಕ ಚಿಂತನೆಗಳಿರುವುದನ್ನು ಗುರುತಿಸಬಹುದು.*

**Keywords:** *ಸಾಮಾಜಿಕ ಪಿಡುಗುಗಳು, ಶಿವಶರಣರ ಕ್ರಾಂತಿ, ಬಸವಣ್ಣನವರ ಚಿಂತನೆ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ.*

## ಪೀಠಿಕೆ

ಸಮಾನತೆಯ ಸಮಾಜದ ಸ್ಥಾಪನೆಗೆ ಶ್ರಮಿಸಿದ ಬಸವಣ್ಣನವರದು ಸಾರ್ವಕಾಲಿಕ ಒಪ್ಪಿತವಾದ ವ್ಯಕ್ತಿತ್ವ. ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಬಸವ ಚಿಂತನೆಗೊಂದು ವಿಶಿಷ್ಟ ಸ್ಥಾನವಿದೆ. ಜಾತಿ

***Please cite this article as:*** ಮಂಜುನಾಥ ಆಚಾರಿ. (2025). ಸಮಾನತೆಯ ಸಮಾಜ ನಿರ್ಮಾಣದಲ್ಲಿ ಬಸವ ಚಿಂತನೆ: ಒಂದು ಸಮಾಜಶಾಸ್ತ್ರೀಯ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 52–56

ವಿಷಮತೆಯ ಹಾಗೂ ಸಾಮಾಜಿಕ ಅಸಮಾನತೆಯ ವಿರುದ್ಧ ಬಸವಣ್ಣನವರು ನಡೆಸಿದ ಪ್ರಯೋಗ ಹಾಗೂ ಅವರು ನಡೆಸಿದ ಹೋರಾಟ ಭಾರತದ ಸಾಮಾಜಿಕ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಅಂದಿನ ಸಮಾಜದ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಗುರುತಿಸಿದ್ದಲ್ಲದೆ, ಕಟುವಾಗಿ ವಿರೋಧಿಸಿದ್ದಾರೆ. ಸಾಮಾಜಿಕ ಪರಿವರ್ತನೆಯ ಹೊಸ ಮನ್ವಂತರಕ್ಕೆ ಕಾರಣರಾದ ಬಸವಣ್ಣನವರು ಒಬ್ಬ ಆಂದೋಲನಕಾರಿ, ಮಾನವತಾವಾದಿ, ದಲಿತೋದ್ಧಾರಕ. ಸಾಮಾಜಿಕ ಸಮಾನತೆಯ ಉದಾತ್ತ ಕಲ್ಪನೆಯ ಬಸವಣ್ಣನವರು ಸಾಮಾಜಿಕ ಸುಧಾರಣೆಯ ಪ್ರತಿಪಾದಕರಾಗಿದ್ದರು. ಈ ಲೇಖನವು ಬಸವಣ್ಣನವರ ಚಿಂನೆಯ ಸಾಮಾಜಿಕ ಸಮಾನತೆಯು –ಜಾತಿ ಸಮಾನತೆ, ಲಿಂಗ ಸಮಾನತೆ, ಆರ್ಥಿಕ ಸಮಾನತೆ ಮತ್ತು ಕಾಯಕ ಸಮಾನತೆಯ ಆಯಾಮಗಳನ್ನು ಒಳಗೊಂಡಿದ್ದು ಸಾಮಾಜಿಕ ಪರಿವರ್ತನೆಯಲ್ಲಿ ಅವುಗಳ ಪಾತ್ರಗಳ ಬಗ್ಗೆ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಬೆಳಕು ಚೆಲ್ಲಲಿದೆ. ಲೇಖನಕ್ಕೆ ಸಂಬಧಿಸಿದ ಪೂರಕ ಮಾಹಿತಿಯನ್ನು ಮಾಧ್ಯಮಿಕ ಮೂಲಗಳಿಂದ ಪಡೆಯಲಾಗಿದೆ.

ಜಗತ್ತಿನಲ್ಲಿ ಭಾರತವು ಅತ್ಯಂತ ಪ್ರಾಚೀನವಾದ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಧಾರ್ಮಿಕ ಪರಂಪರೆಯನ್ನು ಹೊಂದಿರುವ ದೇಶವಾಗಿದೆ. ದೇಶದ ಇತಿಹಾಸದುದ್ದಕ್ಕೂ ಋಷಿ ಮುನಿಗಳು, ಸಾಧು–ಸಂತರು, ಯೋಗಿಗಳು, ಸುಧಾರಣಾ ವಾದಿಗಳು, ಸಾಮಾಜಿಕ ಚಿಂತಕರು, ಬುದ್ದಿಜೀವಿಗಳು, ಬರಹಗಾರರು, ಕಲಾಕಾರರು, ಜನನಾಯಕರು ಹಾಗೂ ಮಹಾನ್ ವ್ಯಕ್ತಿಗಳು ಆಗಿ ಹೋಗಿರುವುದನ್ನು ಕಾಣಬಹುದು. ಬಹುಶ: ಜಗತ್ತಿನ ಬೇರಾವ ದೇಶದಲ್ಲಿಯೂ ಭಾರತದಲ್ಲಿ ಹುಟ್ಟಿ ಬಂದಷ್ಟು ದೊಡ್ಡ ಸಂಖ್ಯೆಯಲ್ಲಿ ಇಂತಹಾ ಮಹಾನ್ ವ್ಯಕ್ತಿಗಳು ಹುಟ್ಟಿ ಬಂದಿರಲಿಕ್ಕಿಲ್ಲ. ಬಸವಣ್ಣನವರು ಸಾಮಾಜಿಕ ಸಮಾನತೆಯ ಪ್ರತಿಪಾದನೆ ಮಾಡಲು ಕಾರಣ ಆ ಕಾಲದ ಸಾಮಾಜಿಕ ವ್ಯವಸ್ಥೆಯ ವಿಷಮ ಪರಿಸ್ಥಿತಿ, ಅಜ್ಞಾನ, ಅಂಧಕಾರ, ಭಯ, ಮೌಢ್ಯತೆ ಇತ್ಯಾದಿಗಳ ಆಗರ, ಜಾತಿ, ಮತ, ವರ್ಣ, ಲಿಂಗ, ಉದ್ಯೋಗಗಳಲ್ಲಿ ತಾರತಮ್ಯತೆ, ವರ್ಗಶೋಷಣೆ ನಿರಂತರವಾಗಿ ಕಂಡುಬರುತ್ತಿದ್ದವು. ಅಂದಿನ ಸಂದರ್ಭದಲ್ಲಿ ರಾಜರು ಮತ್ತು ಪುರೋಹಿತಶಾಹಿಗಳು ಮಾಡಿದ್ದೆ ಮಾರ್ಗ ನುಡಿದದ್ದೆ ನಿರ್ಣಯ ಎನ್ನುವಂತಿತ್ತು. ಇವರುಗಳನ್ನು ಪ್ರಶ್ನಿಸುವಂತಿರಲಿಲ್ಲ. ವರ್ಣ ವ್ಯವಸ್ತೆಯಲ್ಲಿನ ಸಾಮಾಜಿಕ ಸಮಾನತೆ ಮಾಯವಾಗಿ ಅಸಮಾನತೆ ಎದ್ದುಕಾಣುತಿತ್ತು ವರ್ಣ ವ್ಯವಸ್ಥೆ ವರ್ಣಾಂಕುರಗೊಂಡ ಜಾತಿ ಭೇದಗಳಾಗಿ ಪರಿಣಮಿಸಿ ಇಡೀ ಸಮಾಜವೇ ಹೋಳು ಹೋಳಾದ ಭಾಗವಾಗಿತ್ತು. ಇಂತಹ ವಿಷಮ ಸಂದರ್ಭದಲ್ಲಿ ಜನಸಮುದಾಯದ ಅಗತ್ಯಗಳಿಗೆ ಸ್ಪಂದಿಸಿ ಸದೃಢ ಸಮಾಜದ ನಿರ್ಮಾಣದ ಅಗತ್ಯ ಮನಗಂಡ ಬಸವಣ್ಣನವರು ಸಾಮಾಜಿಕ, ಧಾರ್ಮಿಕ, ಆರ್ಥಿಕ ಸುಧಾರಣೆಗಳಿಗೆ ಚಾಲನೆ ನೀಡಿದರು.

**ಹನ್ನೆರಡನೇ ಶತಮಾನ ಕಾಲದಲ್ಲಿ ಕರ್ನಾಟಕದ ಸಾಮಾಜಿಕ ಪರಿಸ್ಥಿತಿ**

ಭಾರತದ ಸಾಂಸ್ಕೃತಿಕ ಪರಂಪರೆ ಬಹಳ ಪ್ರಾಚೀನವಾದುದು ಮತ್ತು ಸಂಕೀರ್ಣವಾದುದು. ಭಾರತದ ಸಂಸ್ಕೃತಿಯಲ್ಲಿ ಪ್ರಾಚೀನತೆಯೊಂದಿಗೆ ಹಲವಾರು ಸಮೂಹ ಪಂಥಗಳ, ಪಂಗಡಗಳ, ಮತ ಸಮೂಹಗಳ ಜೀವನ ಕ್ರಮಗಳು ಸಮಾವೇಶಗೊಂಡಿರುವುದನ್ನು ಕಾಣಬಹುದು. ಸಾಮಾಜಿಕ ಸಮಸ್ಯೆಗಳು ಕಾಲ, ದೇಶ, ಪರಿಸರ, ಸನ್ನಿವೇಶ ಮತ್ತು ಮೌಲ್ಯಗಳಿಗೆ ಅನುಗುಣವಾಗಿ ಪರಿವರ್ತಿತವಾಗುತ್ತಾ ಇರುತ್ತವೆ. ಸಮಸ್ಯೆ ರಹಿತ ಸಮಾಜ ಆದರ್ಶ ಕಲ್ಪನೆಯಾಗಿದೆ ಹೊರತು ವಾಸ್ತವಿಕವಾಗಿ ಸಾಧ್ಯವಿಲ್ಲ. ಅಂತೆಯೇ ವೀರಶೈವ ಆಂದೋಲನದ ಪ್ರವರ್ತಕರಾದ ಬಸವೇಶ್ವರರ ಕಾಲಕ್ಕೂ ಮುಂಚೆ ನಮ್ಮ ನಾಡಿನ ಅದರಲ್ಲೂ ಮುಖ್ಯವಾಗಿ ಕರ್ನಾಟಕದ ಸಾಮಾಜಿಕ ಹಾಗೂ

ಧಾರ್ಮಿಕ ಪರಿಸ್ಥಿತಿ ತೀರಾ ಅತೃಪ್ತಿದಾಯಕವೂ ಮತ್ತು ಗೊಂದಲಮಯವೂ ಆಗಿತ್ತು. ವರ್ಣವ್ಯವಸ್ಥೆಯು ಜಾತಿ ಪದ್ಧತಿಗೆ ಕಾರಣವಾಗಿ ಜಾತಿ–ಜಾತಿಗಳ ನಡುವಿನ ಅಸಮಾನತೆ ಮೇರೆ ಮೀರಿತ್ತು. ಉಚ್ಚ–ನೀಚ, ಮೇಲು–ಕೀಳು, ಸ್ಪರ್ಶ ಮತ್ತು ಅಸ್ಪರ್ಶ, ಪವಿತ್ರ– ಅಪವಿತ್ರ ಎಂಬ ವ್ಯತ್ಯಾಸಗಳು ಶೋಷಣೆ ಮತ್ತು ಹಿಂಸಾಚಾರಕ್ಕೆ ಕಾರಣವಾಗಿದ್ದವು. ವಿಧಿ–ನಿಷೇಧಗಳಿಂದ ಸಮಾಜದ ಬಹುದೊಡ್ಡ ವರ್ಗವೊಂದು ಅಸಹನೀಯವಾದ ನೋವಿನಿಂದ ಜೀವನ ನಡೆಸುವಂತಾಗಿತ್ತು.

ಹನ್ನೆರಡನೇಯ ಶತಮಾನದ ಕಾಲದಲ್ಲಿ ಸಮಾಜಿಕ–ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಿದರೆ ಜಡತ್ವದಿಂದ ಕೂಡಿದ ಮೂಢನಂಭಿಕೆಗಳು ಮತ್ತು ಸಮಾಜಘಾತುಕ ಅಂಶಗಳು ಚಾಲ್ತಿಯಲ್ಲಿದ್ದವು. ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಬಹಳವಾಗಿ ಬಡವರು ಶೋಷಣೆಗೆ ಬಲಿಪಶುಗಳಾಗಿದ್ದರು. ಸಮಾಜದ ಅತ್ಯಂತ ಕೆಟ್ಟದಾದ ಆಚರಣೆ ಅಸ್ಪೃಶ್ಯತೆ ಚಾಲ್ತಿಯಲ್ಲಿತ್ತು. ಅಲ್ಲದೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಇಂತಹ ಸಂದರ್ಭದಲ್ಲಿ ಆಧುನಿಕ ಪರಿಕಲ್ಪನೆಯಾದ ಸರ್ವೋದಯದ ಬೀಜವನ್ನು ಬಿತ್ತಿ ಸಾಮಾಜಿಕ ಕ್ರಾಂತಿಗೆ ಕಾರಣವಾದ ಬಸವೇಶ್ವರರ ಚಿಂತನೆಗಳು ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆದವು.

**ಸಮಾನತೆಯ ಸಮಾಜ ನಿರ್ಮಾಣದಲ್ಲಿ ಬಸವ ಚಿಂತನೆಯ ಪಕ್ಷಿ ನೋಟ**

ಕರ್ನಾಟಕ ಕಂಡ ಬಹುದೊಡ್ಡ ಕ್ರಾಂತಿಕಾರಿ ಪುರುಷರೆಂದರೆ ಬಸವೇಶ್ವರರು. ಬಸವೇಶ್ವರರು ಕೈಗೊಂಡ ಸುಧಾರಣಾ ಕಾರ್ಯಗಳು ಬಹಳ ವೈಚಾರಿಕತೆಯಿಂದ ಕೂಡಿದ್ದವು. ವ್ಯಕ್ತಿಯು ಸಮಾಜದ ಒಂದು ಭಾಗ, ಸಮಾಜವು ವ್ಯಕ್ತಿ ಜೀವನದಷ್ಟೇ ಪ್ರಧಾನವಾದುದು. ವ್ಯಕ್ತಿತ್ವ ಬೆಳವಣಿಗೆಗೆ ಸ್ವಾಸ್ಥ ಸಮಾಜ ತೀರಾ ಅಗತ್ಯವಿದೆ ಎನ್ನುವುದು ಅವರ ವಾದವಾಗಿತ್ತು. ಬಸವಣ್ಣನವರ ಮುಖ್ಯ ಉದ್ದೇಶ ಸಾಮಾಜಿಕ ಸುಧಾರಣೆಯೇ ಆಗಿತ್ತು. ಅವರ ಆ ಪ್ರಯತ್ನದಲ್ಲಿಯೇ ಹೊಸದೊಂದು ಧಾರ್ಮಿಕ ಪಂಥವಾಗಿ ವೀರಶೈವ ಮತ ವಿಕಾಸಗೊಂಡಿತು. ತನ್ನ ವಿಚಾರಧಾರೆಗಳ ತಾತ್ವಿಕ ಚರ್ಚೆ ನಡೆಸಲು "ಅನುಭವ ಮಂಟಪ"ವನ್ನು ಸ್ಥಾಪಿಸಿ ಜಾತಿ, ಮತ, ಪಂಥ, ಪಂಗಡಗಳ ಭೇದವಿಲ್ಲದೆ ಅಸ್ಪೃಶ್ಯರ ಸಹಿತವಾಗಿ ಎಲ್ಲರೂ ಭಾಗವಹಿಸುವಂತೆ ಮಾಡಿದ ಬಸವಣ್ಣನವರ ಸಾಮಾಜಿಕ ಸುಧಾರಣೆಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

**ಜಾತಿ–ವರ್ಗಗಳಿಂದ ಮುಕ್ತವಾದ ಸಮಾಜದ ರಚನೆಗೆ ಒತ್ತು**

'ಭಾರತೀಯ ಸಮಾಜವು ಜಾತಿ ಪದ್ಧತಿಯ ಆಧಾರದ ಮೇಲೆ ಅಸಮಾನಗೊಂಡು. ಪರಸ್ಪರ ದ್ವೇಷ, ಅಸೂಯೆ ಹಾಗೂ ಸಂಘರ್ಷಾತ್ಮಕ ಮನೋಭಾವನೆಗಳನ್ನು ಹುಟ್ಟುಹಾಕಿತ್ತು. ಇಂತಹ ಸಾಮಾಜಿಕ ಅಸಮಾನತೆಗೆ ಕಾರಣವಾಗಿದ್ದ ಜಾತಿ ಪದ್ಧತಿ ನಿರ್ಮೂಲನೆ ಮಾಡಲು ಬಸವಣ್ಣನವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ತಮ್ಮ ವಚನಗಳ ಮೂಲಕ ಜಾತಿ, ಮತ, ಲಿಂಗ, ವರ್ಣ ಮತ್ತು ವರ್ಗಗಳ ಆಧಾರಿತ ಭೇದಭಾವಗಳನ್ನು ವಿರೋಧಿಸಿ ಸಮಾನತೆಯ ಸಂದೇಶ ಸಾರಿದರು. ಬಸವಣ್ಣನವರ ಚಿಂತನೆಗಳು ವರ್ಗರಹಿತ ಸಮಾಜದ ಸ್ಥಾಪನೆಯ ಉದ್ದೇಶಗಳನ್ನು ಹೊಂದ್ದಿದ್ದವು. ಈ ಚಿಂತನೆಯು ಸಾಮಾಜಿಕ ಅಸಮಾನತೆಗಳ ಮತ್ತು ಪರೋಹಿತಶಾಹಿ ಹಿಂದೂ ಧರ್ಮದ ಜಾತಿಯ ಏಣಿಶ್ರೇಣಿ ವ್ಯವಸ್ಥೆಯ ವಿರುದ್ಧ ಬಂಡೆದ್ದು ನಿಲ್ಲುವಂತೆ ಮಾಡಿತು. ಮೇಲ್ಜಾತಿಗಳಿಂದ ಕೆಳಜಾತಿಗಳ ಶೋಷಣೆಗಳಾಗುತ್ತಿದ್ದುದನ್ನು ಬಸವಣ್ಣನವರು ಒಪ್ಪಲಿಲ್ಲ. ಜಾತಿ ವ್ಯವಸ್ಥೆಯ ಭಾಗವಾಗಿದ್ದ ಅಸ್ಪೃಶ್ಯತೆಯನ್ನು ಅವರು ಬಲವಾಗಿ ಖಂಡಿಸಿ ಸದಾಚಾರ ಮತ್ತು ಸನ್ನಡತೆಗೆ ಪ್ರಾಮುಖ್ಯತೆಯನ್ನು ನೀಡಿದರು. ಸಮಾಜದಲ್ಲಿ ಮೇಲು ಕೀಳು ಎಂಬ ಭೇದ ಸಲ್ಲದೆಂದು ಹೇಳಿದ ಅವರು ಹುಟ್ಟಿನಲ್ಲಿ ಬ್ರಾಹ್ಮಣರಿರಲಿ ಅಂತ್ಯಜರಿರಲಿ ಎಲ್ಲರೂ ಸಮಾನರು

ಎಂದು ತಿಳಿಯ ಪಡಿಸುವುದರೊಂದಿಗೆ ಜಾತಿ–ವರ್ಗಗಳಿಂದ ಮುಕ್ತವಾದ ಸಮಾಜದ ನಿರ್ಮಾಣಕ್ಕೆ ಒತ್ತು ನೀಡಿದರು.

**ಕಾಯಕ/ವೃತ್ತಿಯಲ್ಲಿ ಸಮಾನ ಗೌರವಕ್ಕೆ ಪ್ರಯತ್ನ**

ಬಸವಣ್ಣನವರ ದೃಷ್ಟಿಯಲ್ಲಿ ಕಾಯಕದಲ್ಲಿ ಮೇಲು–ಕೀಳೆಂಬ ಭೇದವಿಲ್ಲ. ಆದರೆ ಮಾಡುವ ಕೆಲಸ ನ್ಯಾಯ ಸಮ್ಮತಿಯಾಗಿರಬೇಕು. ನಿಷ್ಠೆಯಿಂದ ಕೂಡಿರಬೇಕು. ಪ್ರಾಮಾಣಿಕವಾಗಿರಬೇಕು ಮತ್ತು ಸತ್ಯಶುದ್ಧವಾಗಿರಬೇಕು ಎಂಬುದಾಗಿತ್ತು. ಎಲ್ಲಾ ವೃತ್ತಿಗೂ ಒಂದು ವಿಶಿಷ್ಟವಾದ ಸ್ಥಾನವಿರುವುದರಿಂದ ನೈತಿಕ ಕಟ್ಟುಪಾಡುಗಳಿಗೆ ಬದ್ಧವಾದ ಯಾವುದೇ ಬಗೆಯ ಮಾನವ ಶ್ರಮವನ್ನು ಗೌರವಿಸಬೇಕು ಎಂದು ಕಾಯಕ ಶ್ರಮದ ಸಮಾನತೆಯ ತತ್ವವನ್ನು ಪ್ರಚಾರ ಮಾಡಿದರು. ಮಹಿಳೆಯಿರಲಿ, ಪುರುಷನಿರಲಿ ತಮಗಿಷ್ಟವಾದ ಕೆಲಸವನ್ನು ಆಯ್ಕೆ ಮಾಡುವ ಸ್ವಾತಂತ್ರವನ್ನು ಬಸವೇಶ್ವರರು ನೀಡಿದ ಫಲವಾಗಿ ಆರ್ಥಿಕ ಬೆಳವಣಿಗೆಗೆ ಕಾರಣವಾಯಿತು.

**ಲಿಂಗ ಸಮಾನತೆ/ ಸ್ತ್ರೀ ಸ್ವಾತಂತ್ರ್ಯದ ಪ್ರತಿಪಾದನೆ**

ಮಾತೃದೇವೋಭವ ಎಂದು ಆರಾಧಿಸುವ ಈ ನಾಡಿನಲ್ಲಿ ಮಹಿಳೆಯನ್ನು ಸರಳೀಕರಣಗೊಳಿಸುವ ಸಂಸ್ಕೃತಿ ಅವಳ ಅಂತಃಸತ್ವವನ್ನು ನಾಶಮಾಡಿದೆ. ಹಿಂದಿನ ಕಾಲದಿಂದಲೂ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರನ್ನು ಅವಗಣನೆ ಮಾಡುವ ಪರಂಪರೆಯಿಂದ, ಸ್ತ್ರೀಯರು ಪುರುಷರ ಅವಲಂಬಿಗಳಾಗಿ, ಅಡಿಯಾಳಾಗಿ ಯಾವುದೇ ಹೆಚ್ಚಿನ ಸ್ವಾತಂತ್ರ್ಯಗಳಿಲ್ಲದೆ ವಾಸಿಸಬೇಕಾಗಿದ್ದ ದಿನಗಳನ್ನು ಗುರುತಿಸಿದ ಬಸವೇಶ್ವರರು ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ತತ್ವಗಳನ್ನು ಪ್ರತಿಪಾದನೆ ಮಾಡಿದರು. ಗಂಡು–ಹೆಣ್ಣು ಎನ್ನುವುದು ಕೇವಲ ಬಾಹ್ಯ ಭೇದವೇ ಹೊರತು ಆಂತರಿಕ ಭಿನ್ನತೆಗಳಲ್ಲ ಎಂದು ಹೇಳುವುದರ ಮೂಲಕ ಸ್ತ್ರೀಯರಿಗೆ ಮುಕ್ತವಾದ ಅವಕಾಶ ಕಲ್ಪಿಸಿಕೊಟ್ಟರು. ಮಹಿಳೆಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಒತ್ತಾಯಿಸಿದ ಬಸವಣ್ಣನವರು ವಿಧವಾ ಪುನರ್ ವಿವಾಹಕ್ಕೆ ಅವಕಾಶಗಳನ್ನು ನೀಡಬೇಕೆಂದು ಪ್ರತಿಪಾದಿಸಿದರು. ಸ್ತ್ರೀಯರಿಗೂ ಕೂಡ ಪುರುಷರಂತೆ ಧಾರ್ಮಿಕ ವಿಚಾರಗಳಲ್ಲಿ ಮುಕ್ತ ಚರ್ಚೆ ಮಾಡಲು ಅವಕಾಶ ನೀಡುವಂತೆ ಒತ್ತಾಯಿಸಿದರು. ಒಟ್ಟಾರೆ ವೈಜ್ಞಾನಿಕ ಆಧಾರಕ್ಕೆ ಅಂಟಿರುವ ಬಸವೇಶ್ವರರು ಸ್ತ್ರೀ–ಪುರುಷರ ಸಮಾನತೆಯನ್ನು ಸಾಧಿಸಿ ಮಹಿಳೆಯರ ಸ್ಥಾನಮಾನವನ್ನು ಎತ್ತರಿಸಲು ಅವರು ಕೈಗೊಂಡ ಪ್ರಯತ್ನಗಳು ಬಹಳ ವಿಶೇಷವಾದದ್ದು. ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು ಅವರಲ್ಲಿ ಆತ್ಮಬಲವನ್ನು ತುಂಬಿದರು.

**ಸಾಂಪ್ರದಾಯ–ಮೂಢನಂಬಿಕೆಗಳು ಮತ್ತು ಕಂದಾಚಾರಗಳನ್ನು ಕಿತ್ತೆಸೆಯಲು ಕರೆ**

ಸಮಾಜದಲ್ಲಿ ಗಾಢವಾಗಿ ಮನೆಮಾಡಿದ್ದ ಸಾಂಪ್ರದಾಯಿಕತೆ, ಮೂಢನಂಬಿಕೆಗಳು ಮತ್ತು ಕಂದಾಚಾರಗಳು ಜನರನ್ನು ವೈಜ್ಞಾನಿಕ ದೃಷ್ಟಿಕೋನದಿಂದ ದೂರವಿರಲು ಕಾರಣವಾಗಿದ್ದವು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲಾ ಬಗೆಯ ಕೆಟ್ಟ ಆಚರಣೆಗಳನ್ನು ಕೈ ಬಿಡಲು ಮತ್ತು ವಿಚಾರ ರಹಿತ, ಆಧಾರರಹಿತ ಹಾಗೂ ತರ್ಕರಹಿತವಾದ ಗೊಡ್ಡು ನಂಬಿಕೆಗಳನ್ನು ತೊಡೆದು ಹಾಕಲು ಬಸವಣ್ಣನವರು ಕರೆ ನೀಡಿದರು. ಮೌಢ್ಯತೆ, ಸಂಪ್ರದಾಯ ಶರಣತೆ ಮತ್ತು ಶೂನ್ಯತೆಗಳು ವಿಜೃಂಭಿಸುತ್ತಿದ್ದ ದಿನಗಳಲ್ಲಿ ಬಸವೇಶ್ವರರು ತಮ್ಮ ಅನುಭವ ಮಂಟಪದ ಮೂಲಕ ಅನುಭವಿಗಳು, ಹಿರಿಯರ ಜೊತೆ ಚರ್ಚಿಸಿ ಅವುಗಳನ್ನು ಮೆಟ್ಟಿನಿಲ್ಲಲು ಕರೆಯಿತ್ತರು.

**ಅಸ್ಪೃಶ್ಯತೆಯ ನಿವಾರಣೆಗೆ ಪ್ರಯತ್ನ**

ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಸುಮಾರು ಎರಡು ಸಾವಿರದ ಐದುನೂರು ವರ್ಷಗಳ ಇತಿಹಾಸವಿದೆ. ಅಸ್ಪೃಶ್ಯತೆಯು ಅಮಾನವೀಯವಾದುದು. ಮಾನವರ ಮಧ್ಯೆ

ಗೋಡೆಗಳನ್ನು ನಿರ್ಮಿಸುವಲ್ಲಿ ಅಸ್ಪೃಶ್ಯತೆಯು ಕಾರಣವಾಗಿದೆ. ಜಾತಿ ಪದ್ಧತಿಯ ಏಣಿಶ್ರೇಣಿಯ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಅತ್ಯಂತ ಕೆಳಮಟ್ಟದ ಸ್ಥಾನವನ್ನು ನೀಡಲಾಗಿತ್ತು. ಮಾನವ ಸ್ಪರ್ಶಕ್ಕೂ ಯೋಗ್ಯರಲ್ಲದವರೆಂದು ಪರಿಗಣಿತವಾಗಿ ಸಾಮಾನ್ಯ ಸಾಮಾಜಿಕ ಸಂಪರ್ಕದಿಂದ ಹಲವಾರು ಬಗೆಯ ಅನರ್ಹತೆಗಳಿಂದ ನರಳಾಡಿದ ಒಂದು ವರ್ಗವು ಅಮಾನವೀಯ ಪರಿಸರದಲ್ಲಿ ಬದುಕಬೇಕಾದ ಪರಿಸ್ಥಿತಿ ಇತ್ತು. ಹನ್ನೆರಡನೆಯ ಶತಮಾನದಲ್ಲಿಯೂ ಆಚರಣೆಯಲ್ಲಿದ್ದ ಜಾತಿ ಪದ್ಧತಿಗೆ ಅಂಟಿಕೊಂಡಿರುವ ಬಹು ದೊಡ್ಡ ಅನಿಷ್ಟ ಪದ್ಧತಿಯಾಗಿರುವ ಅಸ್ಪೃಶ್ಯತೆಯ ವಿರುದ್ಧ ಮೌನಕ್ರಾಂತಿಯನ್ನು ಬಸವೇಶ್ವರರು ನಡೆಸಿದರು. ತಮ್ಮ ವಿಚಾರಧಾರೆಗಳಲ್ಲಿ ಅಸ್ಪೃಶ್ಯತೆಯು ಒಂದು ಮಹಾಪಾಪ ಎಂಬುದನ್ನು ಮನವರಿಕೆ ಮಾಡಿಕೊಟ್ಟವರು ಬಸವೇಶ್ವರರು. ಅಸ್ಪೃಶ್ಯರಿಗೆ ಸಮಾನವಾದ ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಹಕ್ಕುಗಳು ಮತ್ತು ಅವಕಾಶಗಳು ದೊರಕುವಂತಾಗಬೇಕೆಂದು ಅವರು ಆಗ್ರಹ ಪಡಿಸಿದರು. ಅಂತರ್ಜಾತಿಯ ವಿವಾಹಗಳಿಗೆ ಪ್ರೋತ್ಸಾಹವನ್ನು ನೀಡಿದ ಬಸವಣ್ಣನವರು ಅಸ್ಪೃಶ್ಯತೆಯ ನಿವಾರಣೆಗೆ ಅಸಮಾನ್ಯವಾಗಿ ಪ್ರಯತ್ನಗಳನ್ನು ಕೈಗೊಂಡವರು.

**ಉಪಸಂಹಾರ**

ಬಸವಣ್ಣನವರ ಕಾಲದಲ್ಲಿ ಕರ್ನಾಟಕದ ಸಾಮಾಜಿಕ ಹಾಗೂ ಧಾರ್ಮಿಕ ಪರಿಸ್ಥಿತಿ ತೀರಾ ಅತೃಪ್ತಿದಾಯಕವೂ ಮತ್ತು ಗೊಂದಲಮಯವಾಗಿತ್ತು. ವರ್ಣ ವ್ಯವಸ್ಥೆಯು ಜಾತಿ ಪದ್ಧತಿಗೆ ಕಾರಣವಾಗಿ ಜಾತಿ–ಜಾತಿಗಳ ನಡುವಿನ ಅಸಮಾನತೆ ಮೇರೆ ಮೀರಿತ್ತು. ಉಚ್ಚ–ನೀಚ, ಮೇಲು–ಕೀಳು, ಸ್ಪೃಶ್ಯ ಮತ್ತು ಅಸ್ಪೃಶ್ಯ, ಪವಿತ್ರ–ಅಪವಿತ್ರ ಎಂಬ ವ್ಯತ್ಯಾಸಗಳು ಶೋಷಣೆ ಮತ್ತು ಹಿಂಸಾಚಾರಕ್ಕೆ ಕಾರಣವಾಗಿದ್ದವು. ವಿಧಿನಿಷೇಧಗಳಿಂದ ಸಮಾಜದ ಬಹುದೊಡ್ಡ ವರ್ಗವೊಂದು ಅಸಹನೀಯವಾದ ನೋವಿನಿಂದ ಜೀವನ ನಡೆಸುವಂತಾಗಿತ್ತು. ಹೀಗಾಗಿ ಆತ್ಮಶುದ್ಧಿಗೆ ಓಗೊಟ್ಟು ಸಮಾಜಶುದ್ಧಿಯತ್ತ ವಿಸ್ತಾರಗೊಳ್ಳುವುದೇ ಸಮಾನತೆಯನ್ನು ತರುವುದಾಗಿದೆ ಎಂಬುದು ಬಸವಣ್ಣನವರ ವಿಚಾರವಾಗಿತ್ತು ಅವರ ಆ ಪ್ರಯತ್ನದಲ್ಲಿಯೇ ಹೊಸದೊಂದು ಧಾರ್ಮಿಕ ಪಂಥವಾಗಿ ವೀರಶೈವ ಮತ ವಿಕಾಸಗೊಂಡಿತು. ತನ್ನ ವಿಚಾರಧಾರೆಗಳ ತಾತ್ವಿಕ ಚರ್ಚೆ ನಡೆಸಲು "ಅನುಭವ ಮಂಟಪ"ವನ್ನು ಸ್ಥಾಪಿಸಿ ಜಾತಿ, ಮತ, ಪಂಥ, ಪಂಗಡಗಳ ಭೇದವಿಲ್ಲದ ಅಸ್ಪೃಶ್ಯರ ಸಹಿತವಾಗಿ ಎಲ್ಲರೂ ಭಾಗವಹಿಸುವಂತೆ ಮಾಡಿದರು. ಬಸವಣ್ಣನವರ ಚಿಂತನೆಗಳು ಸರ್ವೋದಯದ ಕಲ್ಪನೆಗಳಾದ ಎಲ್ಲರ ಏಳಿಗೆ, ಎಲ್ಲರ ವಿಕಾಸ, ಎಲ್ಲರ ಉತ್ಕರ್ಷ, ಅಂತಿಮವಾಗಿ ಮನುಷ್ಯನ ಉದ್ಧಾರ ಎನ್ನುವ ಅಂಶಗಳನ್ನು ಒಳಗೊಂಡಿತ್ತು. ಸಮಾನತೆ, ಸಮನ್ವಯತೆ, ಸಾಮರಸ್ಯ ಮತ್ತು ಧಾರ್ಮಿಕ ಜಾಗೃತಿ ಮೂಡಿಸಿ ಜಾತಿ ಸಮಾನತೆ, ವರ್ಗ ಸಮಾನತೆ, ಕಾಯಕ ಸಮಾನತೆ, ಲಿಂಗ ಸಮಾನತೆಗಳನ್ನು ಪ್ರತಿಪಾದಿಸಿದ ಬಸವಣ್ಣನವರ ಚಿಂತನೆಗಳಿಗೆ ಭಾರತೀಯ ಸಾಮಾಜಿಕ ಚಿಂತನೆಯಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಎನ್. ಅಕ್ಕಿ. (2018). ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಸೋಮೇಶ್ವರ ಪಬ್ಲಿಕೇಶನ್ಸ್.
- ಫಾಲಾಕ್ಷ. (2007). *ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ.* ಶಶಿ ಪ್ರಕಾಶನ.
- ರಾಮಚಂದ್ರ ಜೋಷಿ. (2011). *ಸಮಗ್ರ ಸಮಾಜಶಾಸ್ತ್ರ.* ಸಿದ್ಧಲಿಂಗೇಶ್ವರ ಪ್ರಕಾಶನ.
- ಶಂಕರ್ ರಾವ್, ಚ.ನ. (2013). *ಭಾರತೀಯ ಸಮಾಜ.* ಜೈ ಭಾರತ್ ಪ್ರಕಾಶನ.
- ಶಂಕರ್ ರಾವ್, ಚ.ನ. (2013). *ಸಾಮಾಜಿಕಾಂದೋಲನಗಳ ಪಕ್ಷಿನೋಟ.* ಜೈ ಭಾರತ್ ಪ್ರಕಾಶನ.